ಚಿಣ್ಣರ ಚಾವಡಿ

**ಪ. ರಾಮಕೃಷ್ಣ ಶಾಸ್ತ್ರಿ**

# ಹಣ ಮತ್ತು ಜಾಣ್ಮೆ



ದೇಶವನ್ನಾಳುವ ರಾಜನ ಮಗನಿಗೂ ಒಬ್ಬ ವ್ಯಾಪಾರಿಯ ಮಗನಿಗೂ ಗಾಢವಾದ ಗೆಳೆತನವಿತ್ತು. ಅವರಿಬ್ಬರೂ ಆಟ–ಊಟ ಒಟ್ಟಿಗೇ ಮಾಡುತ್ತಿದ್ದರು. ಒಂದು ಸಲ ರಾಜನ ಮಗ, 'ಜಗತ್ತಿನಲ್ಲಿ ಸುಖಪಡಲು ಮುಖ್ಯವಾದುದು ಹಣ. ಹಣ ಕೈಯಲ್ಲಿದ್ದರೆ ಏನು ಬೇಕಾದರೂ ಸಾಧಿಸಬಹುದು' ಎಂದು ಹೇಳಿದ. ವ್ಯಾಪಾರಿಯ ಮಗ, 'ಇದು ತಪ್ಪು ಕಲ್ಪನೆ. ಜಾಣ್ಮೆಯಿಲ್ಲದವನ ಬಳಿ ಎಷ್ಟು ಹಣವಿದ್ದರೂ ಸುಖಪಡಲು ಸಾಧ್ಯವಿಲ್ಲ' ಎಂದು ವಾದಿಸಿದ. ಆದರೆ ರಾಜನ ಮಗ ತನ್ನ ಮಾತೇ ಸರಿಯೆಂದು ಸಮರ್ಥಿಸಿಕೊಂಡ. 'ಇಲ್ಲಿಯೇ ಇದ್ದರೆ ನಮ್ಮ ಮಾತುಗಳ ಪರೀಕ್ಷೆ ಸಾಧ್ಯವಿಲ್ಲ. ನಾವು ಬೇರೆ ಊರಿಗೆ ಹೋಗಿ ಸತ್ಯ ಪರೀಕ್ಷೆ ಮಾಡಬೇಕು. ನೀನು ಕೈತುಂಬ ಹಣ ತೆಗೆದುಕೋ. ನಾನು ಬರಿಗೈಯಲ್ಲಿ ಹೊರಡುತ್ತೇನೆ' ಎಂದು ಹೇಳಿದ ಇನ್ನೊಬ್ಬ. ಇಬ್ಬರೂ ಯಾರಿಗೂ ಹೇಳದೆ ಬೇರೆ ಬೇರೆ ದಾರಿ ಹಿಡಿದು ಮನೆಯಿಂದ ಹೊರಟರು.

ರಾಜಕುಮಾರ ಒಂದು ನಗರವನ್ನು ಸೇರಿದ. ಅವನ ಬಳಿ ಹಣವಿರುವುದು ಹಲವು ಯುವಕರಿಗೆ ತಿಳಿಯಿತು. ಅವರು ಅವನ ಗೆಳೆತನ ಬಯಸಿ ಸನಿಹ ಬಂದರು. ಅವರ ಮೋಸ ರಾಜಕುಮಾರನಿಗೆ ತಿಳಿಯಲಿಲ್ಲ. ಹೊಸ ಗೆಳೆಯರ ಜೊತೆಗೂಡಿ ಹಣವನ್ನೆಲ್ಲ ಖರ್ಚು ಮಾಡಿಕೊಂಡ. ಅವನ ಕೈ ಬರಿದಾದ ಕೂಡಲೇ ಗೆಳೆಯರು ಅವನ ಸಂಗ ತೊರೆದರು. ಜೀವನಕ್ಕೆ ಗತಿಯಿಲ್ಲದೆ ರಾಜಕುಮಾರ ವ್ಯಾಪಾರಿಯ ಮಗನನ್ನು ಹುಡುಕಿಕೊಂಡು ಹೊರಟ. ಅವನು ಒಂದು ಗ್ರಾಮದಲ್ಲಿ ಅರ್ಧ ದಿನ ಊರಿನ ಮಕ್ಕಳಿಗೆ ಪಾಠ ಕಲಿಸಿ, ಇನ್ನರ್ಧ ದಿನ ರೈತರ ಕೆಲಸಕ್ಕೆ ನೆರವಾಗಿ ಹಣ ಸಂಪಾದಿಸಿದ್ದ. ಇದನ್ನು ಕಂಡು ರಾಜಕುಮಾರನಿಗೆ ನಾಚಿಕೆಯಾಯಿತು. 'ಗೆಳೆಯಾ, ತಂದಿರುವ ಹಣವೆಲ್ಲ ಮುಗಿಯಿತು. ನನಗೆ